**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 2200/2022**

ಪಿ.ಡಬ್ಲ್ಯೂ: 3

ಸಿ.ಡಬ್ಲ್ಯೂ: 10

ಸಾಕ್ಷಿದಾರರ ಹೆಸರು : ಪರಮೇಶ್ವರಪ್ಪ

ತಂದೆಯ ಹೆಸರು: : ಸಿದ್ದಪ್ಪ

ವಯಸ್ಸು : **57 ವರ್ಷ**

ಉದ್ಯೋಗ : ವ್ಯವಸಾಯ

ವಾಸಸ್ಥಳ : ಬರಗೇನಹಳ್ಳಿ ಗ್ರಾಮ

**ದಿನಾಂಕ: 05-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ ನಾನು ರಂಗೇನಹಳ್ಳಿ ಗ್ರಾಮದಲ್ಲಿ ಸಂಜೆ 4-00 ಗಂಟೆ ಸಮಯದಲ್ಲಿ ಅಪಘಾತವಾದ ವಿಚಾರವಾಗಿ ಪೊಲೀಸರು ಒಂದು ದಾಖಲಾತಿಗೆ ಸಹಿ ಮಾಡಿಸಿಕೊಂಡಿರುತ್ತಾರೆ. ನನ್ನ ಜೊತೆ ಚಾಸಾ-9 ರವರು ಸಹಿ ಮಾಡಿರುತ್ತಾರೆ. ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿರುತ್ತದೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-4 ರ ಛಾಯಚಿತ್ರದಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ** ಶ್ರೀ ಜೆ ಟಿ ಜೆ **ವಕೀಲರಿಂದ.**

ಮಹಜರ್ ಮಾಡಿದ ದಿನದಂದು ನಾನು ಸಂತೆಗೆ ಹೋಗಿರುತ್ತೇನೆ. ಆ ದಿನದಂದು ಬಹಳ ಜನ ಓಡಾಡುತ್ತಿದ್ದರು ಎಂದರೆ ಸರಿ. ಮಹಜರ್ ನ್ನು ಸಂಜೆ 4-30 ಗಂಟೆಗೆ ಮಾಡಿರುತ್ತಾರೆ. ಮಹಜರ್ ಮಾಡಿದ ಸ್ಥಳದ ಚಕ್ಕುಬಂದಿ ನನಗೆ ತಿಳಿದಿರುತ್ತದೆ, ಪೂರ್ವಕ್ಕೆ ಸಂತೆ, ಪಶ್ಚಿಮಕ್ಕೆ ಲಕ್ಕವಳ್ಳಿ ರೋಡ್, ಉತ್ತರಕ್ಕೆ ರೋಡ್, ದಕ್ಷಿಣಕ್ಕೆ ಬಸ್ ನಿಲ್ದಾಣ ಇರುತ್ತದೆ. ಮಹಜರ್ ಮಾಡವ ಸಮದಲ್ಲಿ ನನ್ನ ಜೊತೆ ಕೃಷ್ಣಮೂರ್ತಿ, ಮಂಜುನಾಥ್ ಮತ್ತು ಇನ್ನೊಬ್ಬ ಮಂಜುನಾಥ್ ಇದ್ದರು.

ಅಪಘಾತವನ್ನು ನಾನು ಸೋಮವಾರ ಸಂಜೆ 4-30 ಗಂಟೆ ಸಮಯದಲ್ಲಿ ನೋಡಿರುತ್ತೇನೆ. ಮಹಜರನ್ನು ಮರುದಿನ ಮಾಡಿರುತ್ತಾರೆ. ನಿಮಗೆ ಯಾವುದೇ ವಿಚಾರ ತಿಳಿಯದೇ ಇದ್ದರೂ ಸಹ ಚಾಸಾ-1 ರವರಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**